

ಕಾಡು ನಾಡನ್ನು ಸಲಹುತ್ತದೆ. ಆದರೆ, ಬಳ್ಳಾರಿ ಜಿಲ್ಲೆಯ ಪಾಲಯ್ಯನ ಕೋಟೆಯ ಜನರು ಕಾಡನ್ನೇ ಸಲಹುತ್ತಿದ್ದಾರೆ. ಸರ್ಕಾರದಿಂದ ತಮ್ಮ ವಶಕ್ಕೆ ಬಂದಿರುವ ನೆಡುತೋಪನ್ನು ಊರಿನ ನಿಧಿಯಂತೆ ಕಾಪಾಡುತ್ತಿದ್ದಾರೆ. ಇದರ ಫಲವಾಗಿ ಕಾಡೀಗ ಹುಲುಸಾಗಿದೆ, ಜೀವವೈವಿಧ್ಯದ ನೆಲೆಯಾಗಿದೆ.

■ **ಸ್ವರೂಪಾನಂದ ಎಂ. ಕೊಟ್ಟೂರು**
ಚಿತ್ರಗಳು: ರವಿಕುಮಾರ್ ಉಜ್ಜಯಿನಿ

# ಕಾಡಿಗೆ ಕೋಟೆಯಾದ ಪಾಲಯ್ಯನ ಕೋಟೆ

ಅಲ್ಲೊಂದು ಪುಟ್ಟ ಕೆರೆ. ಕೆರೆಗೆ ಹೊಂದಿಕೊಂಡಂತೆ ದಟ್ಟವಾದ ಮರಗಾಡು. ಅದರಾಚೆಗೆ ಗುಡ್ಡ. ಆ ಗುಡ್ಡದ ಮೇಲೊಂದು ಕೋಟೆ! ಒಂದೇ ಕ್ಯಾನ್ವಾಸ್‌ಗೆ ದಕ್ಕುವಂತಿರುವ ಈ ದೃಶ್ಯವನ್ನು ಹತ್ತಿರದಿಂದ ಕಣ್ತುಂಬಿಕೊಳ್ಳುವುದೊಂದು ಅಪೂರ್ವ ಅನುಭವ.

ಸಾಲು ಹೊಲಗಳ ದಾಟಿ ಕೆರೆಯ ಹಿನ್ನೀರ ತಟದಲ್ಲಿ ನಿಂತರೆ, ಕಣ್ಣು ಹಾಯಿಸಿದಷ್ಟೂ ದೂರ ಒತ್ತೊತ್ತಾಗಿ ಬೆಳೆದ ಕರಿ ಜಾಲಿ ಮರಗಳು! ಕಣ್ಣು ಕೋರೈಸುವಷ್ಟು ಹಸಿರು. ಹಸಿರ ಮಡಿಲೊಳಗೆ ವೈವಿಧ್ಯಮಯ ಪಕ್ಷಿಗಳ ಕಲರವ. ಅಣತಿ ದೂರದಲ್ಲಿದ್ದ ಪೈರಿನ ಮಧ್ಯದಿಂದ ಅಜ್ಜನೊಬ್ಬ ‘ಓಯ್, ಯಾರಪ್ಪ ಅಲ್ಲಿ?’ ಎಂದು ಕೂಗುತ್ತಾ ಬಂದರು. ದೊಡ್ಡ ಹೆಜ್ಜೆಗಳಲ್ಲಿ ಸಮೀಪಕ್ಕೆ ಬಂದವರು, ‘ನಿಮಗೆ ಇಲ್ಲೇನು ಕೆಲಸ? ಹೋಗಬೇಡ್ರಿ ಕಾಡಿನೊಳಗೆ’ ಎಂದು ಗದರಿದರು.

‘ಯಾಕಜ್ಜ? ಕಾಡಿನೊಳಗೆ ಯಾಕೆ ಹೋಗಬಾರದು’ ಎಂದರೆ, ‘ಈ ಕಾಡು ನಮ್ಮೂರಿನದ್ದು, ನಾನು ಇದರ ಕಾವಲುಗಾರ’ ಎಂದು ಅಜ್ಜ ಪರಿಚಯಿಸಿಕೊಂಡರು. ಆ ಅಜ್ಜನ ಹೆಸರು ಮಲಿಯಪ್ಪ. ಕಾದಿಟ್ಟ ಅರಣ್ಯಗಳೇ ಕಡಿದಿಟ್ಟ ಅರಣ್ಯಗಳು ಆಗುತ್ತಿರುವ ಈ ದಿನಗಳಲ್ಲಿ ಕಾಡನ್ನು ಕಾಪಾಡುವವರೂ ಉಂಟಾ? ಆಶ್ಚರ್ಯವಾಯ್ತು. ಆ ಸೋಜಿಗವನ್ನು ಮುಚ್ಚಿಟ್ಟುಕೊಂಡು ವಿಚಾರಿಸಿದರೆ, ಜನರ ಆರೈಕೆಯಲ್ಲಿರುವ ಇಲ್ಲಿನ ಸಾವಿರಾರು ಕರಿ ಜಾಲಿ ಮರಗಳಿಗೀಗ ಹದಿನಾರರ ಹರೆಯ ಎನ್ನುವ ಸಂಗತಿ ತಿಳಿಯಿತು.

ಇದು ಬಯಲು ಸೀಮೆಯಲ್ಲಿ ಜನರೇ ಸೃಷ್ಟಿಸಿ, ಸಲಹುತ್ತಿರುವ ಪುಟ್ಟ ಕಾಡು! ನೆಲದಲ್ಲಿ ಹರಡಿರುವ ಕುರುಚಲು ಗಿಡಗಳು, ಬಂಡೆಯೇ